ಅ.ದಾ. ನಂ. 446/22 ಪಿ .ಡಬ್ಲ್ಯೂ-1

ದಿನಾಂಕಃ 03.03.2026 ರಂದು ಪಿ.ಡಬ್ಲ್ಯೂ-1 ರವರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ಪ್ರತಿವಾದಿ ನನ್ನ ತಮ್ಮ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿ ಆಸ್ತಿಯನ್ನು ಹಂಚಿಕೊಂಡಿರುತ್ತೇವೆ ಎಂದರೆ ಸರಿ. ನೋಂದಾಯಿತ ವಿಭಾಗ ಪತ್ರ ಮಾಡಿಕೊಂಡಿರುತ್ತೀರ ಎಂದರೆ ಹೌದು. ಯಾವ ಇಸವಿಯಲ್ಲಿ ನೋಂದಾಯಿತ ವಿಭಾಗ ಪತ್ರ ಮಾಡಿಕೊಂಡಿರುತ್ತೀರ ಎಂದರೆ ದಿನಾಂಕ ನೆನಪಿರುವುದಿಲ್ಲ. ಪತ್ರವನ್ನು ಹಾಜರುಪಡಿಸುತ್ತೇನೆ. ವಿಭಾಗವನ್ನು ಯಾರೊಂದಿಗೆ ಮಾಡಿಕೊಂಡಿರುತ್ತೀರ ಎಂದರೆ ನಾನು, ಪ್ರತಿವಾದಿ ಮತ್ತು ಕಾಂತರಾಜು. ದಿ.09.10.1998 ರಂದು ಆಗಿರುವ ವಿಭಾಗ ಪತ್ರದಲ್ಲಿ ಸಾಕ್ಷಿದಾರರ ಸಮಕ್ಷಮ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ವಿಭಾಗ ಪತ್ರದ ಪ್ರಕಾರ ಸಾಕ್ಷಿಗಳಾಗಿ ಸೋಮಶೇಖರ ಬಿನ್ ಮರೀಗೇಗೌಡ, ವಿರೂಪಾಕ್ಷ ಬಿನ್ ಪಟೇಲ್ ಶಿವಪ್ಪಗೌಡ ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗ ಪತ್ರ ನೋಂದಣಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

2. ದಾವಾ ಸ್ವತ್ತನ್ನು ಯಾರಿಂದ ಖರೀದಿಸಿರುತ್ತಾರೆ ಎಂದರೆ ನಾನು, ಪ್ರತಿವಾದಿ ಮತ್ತು ಕಾಂತರಾಜುರವರು ನಿಂಗಮ್ಮ ಮತ್ತು ಅವರ ಮಕ್ಕಳಿಂದ ಖರೀದಿಸಿರುತ್ತೇವೆ. ಸದರಿ ಕ್ರಯ ಪತ್ರವನ್ನು ಹಾಜರುಪಡಿಸಿದ್ದೀರ ಎಂದರೆ ಇಲ್ಲ. ಎಷ್ಟು ವಿಸ್ತೀರ್ಣದ ಆಸ್ತಿಯನ್ನು ಖರೀದಿಸಿರುತ್ತೀರ ಎಂದರೆ ಪೂ-ಪ 60 ಅಡಿ, ದ-ಉ 48 ಅಡಿ. ಖರೀದಿಸಿದ ನಂತರ ನಾವು ಮೂರೂ ಜನ ಸಮಭಾಗವಾಗಿ ವಿಭಾಗ ಮಾಡಿಕೊಂಡಿರುತ್ತೇವೆಯೇ ಎಂದರೆ ಸಮಭಾಗ ಮಾಡಿಕೊಂಡಿರುವುದಿಲ್ಲ. ಹಾಗಾದರೆ ನನ್ನ ಹಿಸ್ಸೆಗೆ ಎಷ್ಟು ಬಂದಿರುತ್ತದೆ ಎಂದರೆ ಪೂ-ಪ 21 ಅಡಿ, ದ-ಉ 60 ಅಡಿ. ಕಾಂತರಾಜುರವರಿಗೆ ಪೂ-ಪ 20 ಅಡಿ, ದ-ಉ 60 ಅಡಿ. ಪ್ರತಿವಾದಿಗೆ ಪೂ-ಪ 10 ಅಡಿ, ದ-ಉ 60 ಅಡಿ. ದಾವಾ ಸ್ವತ್ತನ್ನು ಖರೀದಿಸಿದಾಗ ಅದರಲ್ಲಿ ಹಳೆಯ ನಾಡ ಹೆಂಚಿನ ಮನೆ ಇರುತ್ತದೆ. ಸದರಿ ಮನೆಯನ್ನು ಸೇರಿಸಿ ವಿಭಾಗ ಮಾಡಿಕೊಂಡಿರುತ್ತೀರ ಎಂದರೆ ಹೌದು. ವಿಭಾಗ ಮಾಡಿಕೊಂಡಾಗ ಸರ್ವೆ ಮಾಡಿಸಿ ನಕಾಶೆ ತಯಾರಿಸಿಕೊಂಡಿದ್ದೀರ ಎಂದರೆ ಇಲ್ಲ. ಸದರಿ ಸ್ವತ್ತಿನಲ್ಲಿ ನಾವು 3 ಜನ ಕ್ರಮಬದ್ಧವಾಗಿ ವಿಭಾಗ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರದಲ್ಲಿ ಆಗಿರುವ ವಿಭಾಗದಂತೆ ನಮ್ಮ ಹಿಸ್ಸೆಯಲ್ಲಿ ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ವಿಸ್ತೀರ್ಣಕ್ಕೂ ಮತ್ತು ನಾನು

ಸ್ವಾಧೀನದಲ್ಲಿರುವ ವಿಸ್ತೀರ್ಣಕ್ಕೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ.

3. ಪ್ರತಿವಾದಿ ನನ್ನ ಸ್ವಾಧೀನಕ್ಕೆ ತೊಂದರೆ ಕೊಡದೆ ಇದ್ದರೂ ವ್ಯಾಜ್ಯ ಕಾರಣವನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಹಿಸ್ಸೆಯ ಸ್ವಾಧೀನಕ್ಕೆ ನಾನೇ ತೊಂದರೆ ಕೊಟ್ಟು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ಸ್ವಾಧೀನದಲ್ಲಿರುವ ಸ್ವತ್ತಿಗೆ ಬೇಲಿ ನಿರ್ಮಿಸಲು ಪ್ರಯತ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ತೊಂದರೆ ಕೊಡುತ್ತೇನೆ ಎಂದು ಹೆದರಿಸಿರುತ್ತಾರೆ. ಪ್ರತಿವಾದಿ ನನ್ನ ವಿರುದ್ಧ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ.

4. ನನ್ನ ಮತ್ತು ಪ್ರತಿವಾದಿಯ ಹಿಸ್ಸೆಯ ನಡುವೆ ಬೇಲಿ ಇದ್ದು ಸದರಿ ಬೇಲಿಯನ್ನು ನಾನೇ ಕಿತ್ತುಹಾಕುತ್ತೇನೆ ಎಂದು ಹೆದರಿಸಿ ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಸ್ವತ್ತನ್ನು ಲಪಟಾಯಿಸುವ ಉದ್ದೇಶ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.